ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अक्टूबर-दिसम्बर - २०१६

त्रैमासिक पत्रिका



RNI Regd. No. KARBIL/2014/54464



न जात का ना पात का
न रंग भेद का,
इंसान तो बस एक है
किसी भी देश का
न वर्ग वर्ण हैं कहीं
ऊंच-नीच है कहीं ।

आदर्श रस्म रीत है
मधुर मिलन की प्रीत है,
ईश्वर की दी ये जिंदगी
सभी यहां मन मीत हैं ।

अनेकता में एकता का
प्रेम का जहान है,
इन्सानियत पे मर-मिटे जो
इन्सान वो महान है
न जात का .................. ।

डॉ. रमेश पोखरियाल 'निशंक'

ಇಲ್ಲ ಜಾತಿ, ಧರ್ಮ
ಇಲ್ಲ ಬಣ್ಣ, ಭೇದಭಾವ
ಮನುಷ್ಯ ಮಾತ್ರ ಒಬ್ಬನೆ
ಯಾವುದೆ ದೇಶವಾಗಲಿ
ಇಲ್ಲಿ ವರ್ಗ, ವರ್ಣ
ಮೇಲು-ಕೀಳು ಎಲ್ಲಿಯೂ ಇಲ್ಲ.

ಆದರ್ಶ ನೀತಿ ರೀತಿಯಾಗಿದೆ
ಮಧುರ ಮಿಲನದಲ್ಲಿ ಪ್ರೀತಿ
ಈಶ್ವರ ದಯಪಾಲಿಸಿದ ಈ ಜೀವನ
ಇಲ್ಲಿ ಎಲ್ಲರ ಮನಸ್ಸು ಮಿತ್ರಮಯ

ಅನೇಕತೆಯಲ್ಲಿ ಏಕತೆ
ಪ್ರೇಮದ ಜಗತ್ತಿದು
ಮಾನವೀಯತೆಗಾಗಿ ಸಾಯುವವನೆ
ಮಹಾಮಾನವ

ಡಾ. ರಮೇಶ ಪೋಖರಿಯಾಲ 'ನಿಶಂಕ'

ISSN 2320-0371

# ಪರಿವಿಡಿ


೧. ಸಾವಿತ್ರಿ ನಾ ಬಂದೆ
• ಮೂಲ ಮರಾಠಿ : • ರತ್ನಾಕರ ಮತ್ಕರಿ
• ಅನುವಾದ : • ಡಾ. ಪ್ರಭಾ ಭಟ್ ೩೭

೨. ಭಾಷಾ ಕಲಿಕೆ – ತಂತ್ರಜ್ಞಾನ ಬಳಕೆ • ಡಾ. ಆರ್. ವಿ. ಪಾಟೀಲ ೪೬

೩. ಸಮೂಹದ ಧ್ವನಿಯಾಗಿ ದಲಿತ ಆತ್ಮಕಥೆ: ಊರ್ಮಿಳಾ ಪವಾರ
• ಪ್ರೊ. ಮಂಜುಳಾ ಪಿ. ಕಣವಿ
• ಡಾ. ಸಿ. ಎಂ. ತಳವಾರ ೫೧

೪. ಹೊಯ್ಸಳರ ಇತಿಹಾಸ ಲೇಖನ ಕಲೆ : ರಾಜಕೀಯ ವ್ಯವಸ್ಥೆ • ಶ್ರೀಮತಿ ವಿದ್ಯಾ ಹಡಗಲಿ ೫೮

೫. ಅಡಗೂರು ಎಚ್.ವಿಶ್ವನಾಥ್ ಅವರ 'ಮತಸಂತೆ'– ಒಂದು ವಿಮರ್ಶಾತ್ಮಕ ಚಿಂತನೆ • ಡಾ. ಸಿ. ಡಿ. ಪರಶುರಾಮ ೬೩

೬. ಕುಡುಗುಂಜಿ ಕಥೆ; ವ್ಯಥೆ • ಶಶಿಕುಮಾರ. ಕೆ. ಎ. ೬೬

೭ ಡಾ. ಸಿದ್ಧಲಿಂಗಯ್ಯನವರ 'ಊರು ಕೇರಿ' • ಡಾ. ಸವಿತಾ ಎಂ. ಝಳಕಿ ೭೦

೮. ಮನುಕುಲ ಬೆಳಗಿದ ಮಹಾತ್ಮರು – ಬುದ್ಧ, ಬಸವ, ಅಂಬೇಡ್ಕರ • ಶ್ರೀ ಕಾಂಬಳೆ ಧರಮಣ್ಣ ಭಗವಂತ ೭೩

೯. ಅಥಣಿ ಪರಿಸರದ ಧಾರ್ಮಿಕ ನೆಲೆಗಳು • ಶ್ರೀಮತಿ ವಿಜಯಲಕ್ಷ್ಮಿ ಪತ್ತಾರ ೮೦

೧೦. ವಿಶ್ವಗುರು ಬಸವಣ್ಣನ ಸಾಮಾಜಿಕ ಸಮಾನತೆ – ಆದರ್ಶ ಮತ್ತು ಆಚರಣೆ • ಪ್ರೊ. ರಾಜಶೇಖರ ಮಾವಿನಮರ ೮೪


## ಪ್ರವಾಸ ಕಥನ


೧೧. 'ಸೃಷ್ಟಿ' ಚೈತನ್ಯಮಯ • ಪ್ರೊ. ಎಸ್. ಟಿ. ಮೇರವಾಡೆ ೭೬

# ಪ್ರವಾಸ ಕಥನ

## 'ಸೃಷ್ಠಿ' ಚೈತನ್ಯಮಯ

• ಪ್ರೊ. ಎಸ್. ಟಿ. ಮೇರವಾಡೆ

ಸಾಮಾನ್ಯವಾಗಿ ಪ್ರತಿಯೊಬ್ಬ ಪಯಣಿಗನೂ ಒಂದಿಲ್ಲೊಂದು ಕಾರಣಾಂತರಗಳಿಂದಲೋ ಅಥವಾ ಉದ್ದೇಶಗಳ ಬೆನ್ನತ್ತಿಯೋ ಪ್ರವಾಸ ಕೈಗೊಂಡಿರುತ್ತಾನೆ. ಪ್ರವಾಸ ಮಾಡುವದರಿಂದ ದೇಶದ ಬೇರೆ ಬೇರೆ ಸಾಂಸ್ಕೃತಿಕ, ಸಾಮಾಜಿಕ ಬದುಕನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ವಿವಿಧ ಪ್ರದೇಶಗಳ ಅನೇಕ ಭಾಷೆ, ಶೈಲಿ, ರೀತಿ-ನೀತಿ, ಊಟೋಪಚಾರ, ಉಡುಗೆ-ತೊಡುಗೆ, ಸಂಸ್ಕೃತಿ ಹೀಗೆ ವೈವಿಧ್ಯಮಯ ಹಾಗೂ ವಿಭಿನ್ನವಾದ ನೋಟಗಳನ್ನು ಕಾಣಬಹುದು. ದಿನವಿಡಿ ದುಡಿದು ಬಳಲಿ ಬೆಂಡಾದ ಶ್ರಮಿಕರ ಬದುಕು ಒಂದೆಡೆಯಾದರೆ ಬಹುಮಹಡಿ ಕಟ್ಟಡಗಳಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವ ಉಳ್ಳವರ ಅಟ್ಟಹಾಸ ಇನ್ನೊಂದೆಡೆ. ಇದು ಬದುಕಿನ ವಿಪರ್ಯಾಸ, ಜಗತ್ತಿನಾದ್ಯಂತ ಕಣ್ಣಿಗೆ ಕಾಣುವ ದೃಶ್ಯವಿದು. ಹೀಗೆ ನಮಗೆ ಒಮ್ಮೆ ಪ್ರವಾಸ ಕೈಕೊಳ್ಳುವ ಪ್ರಸಂಗ ಒದಗಿ ಬಂತು. ಆ ಪ್ರಸಂಗ ಹೀಗಿದೆ-

ನಮ್ಮ ಸ್ನೇಹಿತರಾದ ಪ್ರೊ.ಎಂ.ಬಿ ಮೂಲಿಮನಿ ಅವರ ಮಗಳ ಮದುವೆ ಮಧ್ಯಪ್ರದೇಶದ ಇಂದೂರಿನಲ್ಲಿತ್ತು. ಮದುವೆ ಆಮಂತ್ರಣವೂ ಬಂದಿತು, ಕಾರಣ ಮಧ್ಯ ಪ್ರದೇಶದ ಸುತ್ತಮುತ್ತಲಿನ ಪ್ರವಾಸ ಸ್ಥಳಗಳನ್ನು ಇದರಿಂದ ನೋಡಬಹುದಲ್ಲವೆಂದು ಅವರ ಆಮಂತ್ರಣವನ್ನು ಒಪ್ಪಿಕೊಂಡು ಮದುವೆ ಸಮಾರಂಭದಲ್ಲಿ ಭಾಗವಹಿಸುವದಕ್ಕಾಗಿ ೬ ಕುಟುಂಬಗಳು ವಿಜಯಪುರದಿಂದ ಹೋಗಲು ಸಿದ್ಧತೆ ಮಾಡಿಕೊಂಡವು. ಜೊತೆಗೆ ದೆಹಲಿ, ಸಿಮ್ಲಾ ಮನಾಲಿ, ಕುಲಿ, ಚಂಡಿಗಡ, ಉಜ್ಜೈನಿಯ ಜ್ಯೋರ್ತಿಲಿಂಗ ದರ್ಶನ ಮಾಡಿಕೊಂಡು ಬರುವುದಾಗಿ ಎಲ್ಲರೂ ಮಾತನಾಡಿಕೊಂಡೆವು. ನಮ್ಮ ಇದೇ ತಂಡವು ಕಳೆದ ನಾಲ್ಕು ವರ್ಷಗಳ ಹಿಂದೆ ಸಿಂಗಾಪುರ, ಮಲೇಸಿಯಾ, ಹಾಗೂ ಥೈಲ್ಯಾಂಡ ಪ್ರವಾಸ ಕೈಕೊಂಡಿತ್ತು.

ಪೂರ್ವ ನಿರ್ಧಾರದಂತೆ ದಿನಾಂಕ ೧೧-೧೧-೨೦೧೬ರಂದು ನಸುಕಿನ ಜಾವ ೨.೩೦ಕ್ಕೆ ವಿಜಯಪುರದಿಂದ ಸೊಲ್ಲಾಪುರ ತಲುಪಿ, ಅಲ್ಲಿಂದ ಶತಾಬ್ದಿ ಎಕ್ಸಪ್ರೆಸ್ ರೈಲು ಹತ್ತಿ ೧೧.೦೦ಗಂಟೆಗೆ ಪುಣೆ ತಲುಪಿದೆವು. ಪುಣೆಯಲ್ಲಿ ದಗುಡು ಶೇತ ಗಣಪತಿಯ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದು ಪುನಃ ಮಧ್ಯಾಹ್ನ ೩.೨೦ಕ್ಕೆ ಪುಣೆ-ಇಂದೊರ ಎಕ್ಸಪ್ರೆಸ್ ರೈಲಿನ ಮುಖಾಂತರ ಪ್ರಯಾಣ ಬೆಳಿಸಿ ಮರುದಿನ ಮುಂಜಾನೆ ೮.೪೦ಕ್ಕೆ ಇಂದೊರ ರೈಲುನಿಲ್ದಾಣ ತಲುಪಿದೆವು.

ನಾವು ಇಂದೊರ ರೈಲು ನಿಲ್ದಾಣವನ್ನು ತಲುಪುವದರಲ್ಲಿ ನಮ್ಮ ಸ್ನೇಹಿತರ ಬೀಗರು ನಮ್ಮ ಬರುವಿಕೆಗಾಗಿ ಕಾಯುತ್ತಿದ್ದರು. ನಮ್ಮನ್ನು ಆದರದಿಂದ ಬರಮಾಡಿಕೊಂಡು ಮದುವೆಯ ಮಂಟಪಕ್ಕೆ ಕರೆದೊಯ್ದು ನಮ್ಮನ್ನು ಆದರ ಆತಿಥ್ಯದಿಂದ ಸತ್ಕರಿಸಿದರು. ಅವರ ಸರಳ ಸಜ್ಜನಿಕೆ, ಸ್ನೇಹ, ಪ್ರೀತಿ, ಸಂಸ್ಕೃತಿ-ಸಂಸ್ಕಾರ ನಮ್ಮನ್ನು ನಿಜಕ್ಕೂ ಮೂಕವಿಸ್ಮಿತರನ್ನಾಗಿಸಿತು.

ಅಂದೇ ಮಧ್ಯಾಹ್ನ ಇಂದೊರ ಸಮೀಪದಲ್ಲಿರುವ ಪ್ರತಿಷ್ಠಿತ ಹನ್ನೆರಡು ಜ್ಯೋರ್ತಿಲಿಂಗಗಳಲ್ಲಿ ಒಂದಾದ ಮಹಾಕಾಲೇಶ್ವರಿ ಜ್ಯೋರ್ತಿಲಿಂಗ ದರ್ಶನ ಪಡೆದುಕೊಂಡೆವು ಹಾಗೇ ಸುತ್ತು-ಮುತ್ತು ಇದ್ದ ಕೆಲವು ದೇವಸ್ಥಾನಗಳಿಗೆ ಹೋಗಿ, ದರ್ಶನ ಪಡೆದುಕೊಂಡೆವು. ನಾನು ಗಮನಿಸಿದಂತೆ ಭಾರತದ ಬಹುತೇಕ ದೇವಾಲಯಗಳಲ್ಲಿ ದೇವರ ಗರ್ಭಗುಡಿಯ ಮುಂದೆ ಆಮೆಯ ಮೂರ್ತಿ ಇರುತ್ತದೆ. ಕೆಲವು ಕಡೆಗೆ ಕಲ್ಲಿನದ್ದು, ತಾಮ್ರದ್ದು, ಬೆಳ್ಳಿ ಹಾಗೂ ಹಿತ್ತಾಳೆಯ ಆಮೆಯ ಮೂರ್ತಿಗಳು ಇರುವುದನ್ನು ನಾನು ಗಮನಿಸಿದ್ದೇವೆ. ಆದರೆ ಇಲ್ಲಿ ನಾವು ಚಿಂತಾಮಣಿ ಗಣೇಶನ ಮುಂದೆ


ISSN : 2320-0391

ಇಲಿ, ಕಾಲಭೈರವನ ಮುಂದೆ ನಾಯಿ, ಮಂಗಲನಾಥನ ಮುಂದೆ ಟಗರಿನ ಮೂರ್ತಿಗಳನ್ನು ನೋಡಿದೆವು.

ನಮ್ಮ ದೇಶದ ಬಹಳಷ್ಟು ಕಡೆ ಆಮೆ ಇರುವದರ ಬಗ್ಗೆ ಪೌರಾಣಿಕ ಹಿನ್ನಲೆ ಇದೆ, ಆದರೆ ಈ ಎಲ್ಲ ದೇವಸ್ಥಾನಗಳ ಮೂರ್ತಿಗಳ ಮುಂದೆ ಇರುವಂತಹ ಇಲಿ, ನಾಯಿ, ಟಗರು ಇವುಗಳ ಹಿನ್ನಲೆ ನಮಗೆ ತಿಳಿದುಬರಲಿಲ್ಲ. ಅದನ್ನು ತಿಳಿದುಕೊಳ್ಳುವಂತಹ ಕುತೂಹಲ ನನಗೆ ತುಂಬಾ ಇತ್ತು ಆದರೆ ಅಲ್ಲಿ ನಮಗೆ ಸರಿಯಾಗಿ ಮಾಹಿತಿ ತಿಳಿಸುವವರಿರಲಿಲ್ಲ. ಆ ಒಂದು ಕೊರಗು ನನ್ನಲ್ಲಿ ಹಾಗೇ ಉಳಿಯಿತು. ಮರುದಿನ ಓಂಕಾರೇಶ್ವನ ದರ್ಶನ ಪಡೆದುಕೊಂಡು ಮರಳಿ ಇಂದೋರಿಗೆ ವಿಮಾನ ನಿಲ್ದಾಣಕ್ಕೆ ಬರುವಷ್ಟರಲ್ಲಿಯೇ ದೆಹಲಿಗೆ ಇಂಡಿಗೋ ವಿಮಾನ ಹೊರಡುವ ತಯಾರಿಯಲ್ಲಿ ಇತ್ತು. ಅಲ್ಲಿಯ ಅಧಿಕಾರಿಗಳಿಗೆ ವಿನಂತಿಸಿಕೊಂಡಾಗ ಹಾಗೂ ೧೪ಜನರು ಇದ್ದ ಕಾರಣಕ್ಕಾಗಿ ಬೊರ್ಡಿಂಗ ಪಾಸ ನೀಡಿ ಒಳಗೆ ಕಳುಹಿಸಿದರು. ಕೇವಲ ೫ ನಿಮಿಷ ತಡವಾಗಿದ್ದರೆ ವಿಮಾನ ನಮ್ಮನ್ನು ಬಿಟ್ಟು ಮೇಲೆ ಹಾರುತ್ತಿತ್ತು. ನಮ್ಮ ಪ್ರವಾಸದ ವೇಳಾ ಪಟ್ಟಿಯಲ್ಲಿ ಓಂಕಾರೇಶ್ವರ ದೇವಸ್ಥಾನದ ದರ್ಶನ ಇರಲಿಲ್ಲ. ಇಲ್ಲಿಯವರೆಗೂ ಬಂದು ಅದನ್ನು ಬಿಟ್ಟು ಹೋಗುವದು ಹೇಗೆ ಅಂತಾ ಸ್ಥಳೀಕರಿಗೆ ವಿಚಾರಿಸಿದಾಗ ಅವರು ವಿಮಾನ ಬಿಡುವ ಸಮಯಕ್ಕೆ ಬರುವದು ಕಷ್ಟವೆಂದರೂ ಅವರ ಮಾತು ಕೇಳದೆ ಹೋದೆವು ತುಂಬಾ ತೊಂದರೆ ಅನುಭವಿಸಿದೆವು. ನಿಗದಿತ ವೇಳಾಪಟ್ಟಿಯಂತೆ ಪ್ರವಾಸ ಮಾಡಬೇಕು ಇಲ್ಲವಾದರೆ ಪ್ರಯಾಸವಾಗುವುದು ಎಂಬುದು ಇಲ್ಲಿ ನಮ್ಮ ಗಮನಕ್ಕೆ ಬಂತು.

ದಿನಾಂಕ ೧೫ರಂದು ದೆಹಲಿಯ ಐತಿಹಾಸಿಕ ಸ್ಮಾರಕಗಳನ್ನು ನೋಡುವದಾಗಿ ಕಾರ್ಯಕ್ರಮ ನಿರ್ಧರಿಸಲಾಗಿತ್ತು. ಮುಂಜಾನೆ ೬.೩೦ರ ಸುಮಾರಿಗೆ ನಮ್ಮ ತಂಡದಲ್ಲಿದ್ದ ಸ್ನೇಹಿತರೊಬ್ಬರಿಗೆ ಆರೋಗ್ಯದ ತೊಂದರೆ ಯಾಯಿತು. ಪ್ರವಾಸದಲ್ಲಿ ಹೆಚ್ಚಿಗೆ ತಿರುಗಾಡುವದು, ಸರಿಯಾಗಿ ಔಷದೋಪಚಾರವಾಗದ ಕಾರಣ ಶುಗರ ಹಾಗೂ ಬಿ.ಪಿ ಹೆಚ್ಚಾಗಿತ್ತು. ನಾವೆಲ್ಲರೂ ಗಾಬರಿಯಾದೆವು. ನಾವು ದೆಹಲಿ ರೈಲ ನಿಲ್ದಾಣದ ಹತ್ತಿರದ ಪಹಾರಗಂಜ ಭಾಗದಲ್ಲಿಯ ವಸತಿ ಗೃಹದಲ್ಲಿ ಇದ್ದೆವು. ತಕ್ಷಣ ಪಹಾರಗಂಜ ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ಗಂಗಾರಾಮ ಸಿ.ಟಿ. ಆಸ್ಪತ್ರೆಗೆ ಹೋದೆವು ಅಲ್ಲಿ ಸರಿಯಾದ ಉಪಚಾರ ಸಿಕ್ಕಿತು. ಅವರ ಸಂಬಂಧಿಕರು ದೆಹಲಿಯಲ್ಲಿ ಇದ್ದ ಕಾರಣ ಅವರಿಗೂ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿದೆವು ಒಂದು ಗಂಟೆಯಲ್ಲಿಯೇ ಅವರು ಆಸ್ಪತ್ರೆಗೆ ಬಂದರು ಅಷ್ಟರಲ್ಲಿ ಸ್ನೇಹಿತರ ಬಿ. ಪಿ. ಶುಗರ ಯಥಾ ಸ್ಥಿತಿಗೆ ಮರಳಿತ್ತು ಅಲ್ಲಿ ಡಾಕ್ಟರ ಜೊತೆ ಮಾತನಾಡಿದಾಗ ಅವರು 'ವಿಶ್ರಾಂತಿ ಇಲ್ಲದಕ್ಕೆ ಹೀಗಾಗಿರಬಹುದು' ಎಂದು ಹೇಳಿದರು. ಅವರು ಚೇತರಿಸಿಕೊಳ್ಳುತ್ತಿದ್ದಂತೆ ನಮಗೆ ಪ್ರವಾಸ ಮುಂದುವರೆಸಲು ವಿನಂತಿಸಿಕೊಂಡರು. ಆಸ್ಪತ್ರೆಯಿಂದ ನಾವು ವಾಪಸ ವಸತಿಗೃಹಕ್ಕೆ ಬಂದು ಸುಧಾರಿಸಿಕೊಳ್ಳುವದರಲ್ಲಿ ಸಮಯ ೧೧ ಗಂಟೆಯಾಗಿತ್ತು. ಅಂದು ಸೋಮವಾರವಿದ್ದ ಕಾರಣ ಬಹಳಷ್ಟು ಸ್ಮಾರಕಗಳಿಗೆ ದೆಹಲಿಯಲ್ಲಿ ರಜೆ ಇತ್ತು. ಆದರೂ ಒಂದು ವಾಹನದಲ್ಲಿ ಹೊರಗಿನಿಂದಲೇ ದೆಹಲಿ ದರ್ಶನ ಮಾಡಿದೆವು. ಕೆಂಪುಕೋಟೆ, ರಾಷ್ಟ್ರಪತಿ ಭವನ, ಪಾರ್ಲಿಮೆಂಟ, ಶಕ್ತಿಸ್ಥಳ, ವಿಜಯಘಾಟ, ಇವೆಲ್ಲವೂ ಹೊರಗಿನಿಂದಲೇ ನೋಡಿ ಕುತುಬ್‌ಮಿನಾರ್ ನೋಡಿಕೊಂಡು ಬಿರ್ಲಾಮಂದಿರಕ್ಕೆ ಬಂದಾಗ ಸಮಯ ೭ ಗಂಟೆಯಾಗಿತ್ತು.

ದಿನಾಂಕ ೧೬ರಂದು ಮುಂಜಾನೆ ೭.೪೦ಕ್ಕೆ ಹೊರಡುವ ದೆಹಲಿ-ಚಂಡಿಗಡ ಶತಾಬ್ದಿ ಎಕ್ಸಪ್ರೆಸ್ ರೈಲಿನಲ್ಲಿ ಪ್ರಯಾಣಿಸಿದೆವು ರೈಲಿನಲ್ಲಿ ಅಲ್ಪೋಪಹಾರ ಚಹಾ, ಕಾಫಿ ಜೊತೆ ಹರಟೆ ಹೊಡೆಯುತ್ತಾ ೧೧ ಗಂಟೆ ೨೦ ನಿಮಿಷಕ್ಕೆ ಚಂಡಿಗಡ ರೈಲ ನಿಲ್ದಾಣಕ್ಕೆ ಬಂದೆವು. ರೈಲ ನಿಲ್ದಾಣದ ಹೊರಗಡೆ ಚಂಡಿಗಡ ಟ್ರಾವೆಲ್ಸ ಕಂಪನಿಯ ಮ್ಯಾನೇಜರ್ ಸುರೇಶ, ವಾಹನ ಚಾಲಕರಾದ ರಾಜಕುಮಾರ ಹಾಗೂ ಮಹೇಶ ನಮಗಾಗಿ ಕಾಯುತ್ತಾ ನಿಂತಿದ್ದರು. ಮೊದಲೇ ದೂರವಾಣಿ ಮೂಲಕ ಅವರೊಂದಿಗೆ ಸಂಪರ್ಕಿಸಿದೆವು ಹನ್ನೆರಡು ಸುಖಾಸನಗಳ ವಾಹನ ಹಾಗೂ ಇನೊವಾ ಎರಡು ವಾಹನಗಳಲ್ಲಿ ನಾವೆಲ್ಲರೂ ಕುಳಿತುಕೊಂಡು ಚಂಡಿಗಡದಿಂದ ಸಿಮ್ಲಾಕ್ಕೆ ಹೊರಟೆವು ದಾರಿ ಉದ್ದಕ್ಕೂ ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತ ಸಾಗಿದೆವು ದಾರಿಯ ಎರಡೂಬದಿಗೆ ಮುಗಿಲನ್ನು ಚುಂಬಿಸುವ ಗಿಡಮರಗಳು, ಬೆಟ್ಟಗುಡ್ಡಗಳು, ಹೂ-ಬಳ್ಳಿಗಳು ಪ್ರಕೃತಿಯ ಸೌಂದರ್ಯದಿಂದ ಕಣ್ಣು ತುಂಬಿದವು, ಮನಸ್ಸು ಪ್ರಫುಲ್ಲತವಾಯಿತು.

ನಿಜಕ್ಕೂ ಸಿಮ್ಲಾ ಭೂಮಿಯ ಮೇಲಿನ ಸ್ವರ್ಗವೇ ಸರಿ. ಬಾನಿನಲ್ಲಿ ಹಾರಾಡುವ ಬಣ್ಣ ಬಣ್ಣದ ಹಕ್ಕಿಗಳ ಹಾರಾಟ, ಗಿಡಗಳಲ್ಲಿ ಕುಳಿತ ಹಕ್ಕಿಗಳ ಇಂಚರ ನಮ್ಮೆಲ್ಲರ ಮನಸೂರೆಗೊಂಡಿತು. ಬ್ರಹ್ಮಸೃಷ್ಟಿ ಎಷ್ಟೊಂದು ಅದ್ಭುತ ಅಲ್ಲವೇ? ನಿಜಕ್ಕೂ ಧನ್ಯತೆಯ ಭಾವ ಬಂದು ನಾನು ಮೂಕ ವಿಸ್ಮಿತನಾದೆ. ಸುಂದರ ಸೊಬಗಿನ ನಿಸರ್ಗದ ಮಡಲಿನಲ್ಲಿ ನಿಂತು ಮೌನಿಯಾದೆ. ಶಬ್ದಗಳು

ಹೊರಡದಾದವು ನಾನು ಪ್ರಕೃತಿಯ ಸುಂದರ ಲೋಕದಲ್ಲಿ ಲೀನವಾಗಿ ಮೈಮರೆತಿದ್ದೆ. ನಿಧಾನವಾಗಿ ಮತ್ತೆ ಭಾವ ಪ್ರಪಂಚದಿಂದ ಹೊರಗೆ ಬಂದು ಆ ಸೃಷ್ಟಿಯನ್ನು ಕಲಾವಿದನಾಗಿ ಕುಂಚದಲ್ಲಿ ಸೆರೆ ಹಿಡಿಯಬೇಕೆನಿಸಿತು. ಭಾವ-ಲಹರಿ ಅರಳಿ ಕವಿಯಾಗಿ ಕವಿತೆಯಲ್ಲಿ ಪ್ರಕೃತಿ ಮಾತೆಯನ್ನು ಸೆರೆಹಿಡಿಯಬೇಕೆಂದೆನಿಸಿತು. ಈ ಹುಚ್ಚು ಮನಸ್ಸು ಹತ್ತು ಹಲವು ಯೋಚನೆಗಳಿಂದ ಯೋಚಿಸಿ ಭಾವನಾ ಲೋಕದಿಂದ ಹೊರಬಂದು ಓ ಯಾತ್ರಿಕನೆ ಇದು ಬೆಟ್ಟಗುಡ್ಡಗಳ, ನದಿಸರೋವರಗಳ ಪ್ರಾಣಿ ಪಕ್ಷಿಗಳ ಸುಂದರಲೋಕ ಇಲ್ಲಿ ಕುಹಕತೆಗೆ ಅವಕಾಶವಿಲ್ಲ ಕೈಮುಗಿದು ಸೌಂದರ್ಯ್ಯವನ್ನು ಸವಿದು ಮುಂದೆ ಸಾಗು ಎಂದಂತಾಯಿತು.

ದಿನಾಂಕ ೧೬ರಂದು ಮುಂಜಾನೆ ೧೦ ಗಂಟೆಗೆ ಸಿಮ್ಲಾ ನಗರ ದರ್ಶನಕ್ಕೆ ಹೊರೆಟವು ಊರೆಲ್ಲ ಸುತ್ತಿ ಕುಪ್ರಿ ಪಹಾಡ ನೋಡಲು ಸಿದ್ಧರಾದೆವು. ಕುಪ್ರಿ ಪಹಾಡ ೨೬೨೨ ಮೀಟರ ಎತ್ತರ ಅಲ್ಲಿಗೆ ಕುದುರೆಯ ಮೇಲೆ ಹತ್ತಿಯೇ ಹೋಗಬೇಕು, ವಾಹನದಿಂದ ಕೆಳಗಿಳಿದು ಮುಂದೆ ಸಾಗುವದರಲ್ಲಿಯೇ ಕುದುರೆ ಸವಾರರು ತಮ್ಮ ಕುದುರೆಗಳನ್ನು ಸಾಲಾಗಿ ನಿಲ್ಲಿಸಿದ್ದರು. ತಕ್ಷಣ ನಮ್ಮ ಒಂಬತ್ತು ಜನ ಮಹಿಳೆಯರು ರಾಣಿ ಚನ್ನಮ್ಮನಂತೆ ಕುದರೆ ಮೇಲೆ ಕುಳಿತುಕೊಂಡರು. ಅವರ ಹಿಂದೆ ನಮ್ಮ ಕುದುರೆಗಳು ಹೆಜ್ಜೆ ಹಾಕ ತೊಡಗಿದವು, ಕಲ್ಲು, ಉಸುಕು, ಎತ್ತರ ಪ್ರದೇಶ ಕೆಳಗಡೆ ನೋಡಿದರೆ ಭಯವೆನಿಸುತ್ತಿತ್ತು ಹೇಗೊ ೨೬೨೨ ಮೀಟರಿನ ಕುಪ್ರಿ ಪಹಾಡ ಮೇಲೆ ಹೋಗಿ ನಿಂತೆವು. ಅಲ್ಲ ಶೇಬು ಹಣ್ಣು ಬೆಳೆಯುವ ಮೂರು ತೋಟಗಳಿದ್ದವು ಯಾವ ಗಿಡದಲ್ಲಿಯೂ ಶೇಬು ಇರಲಿಲ್ಲ ಕಾರಣ ಹಣ್ಣಿನ ಸಿಜನ್ ಮುಗಿದಿತ್ತು. ಒಂದೆರಡು ಗಂಟೆ ಕುಪ್ರಿ ಪಹಾಡ ಸುತ್ತಾಡಿ ಗುಡ್ಡುಗಾಡು ಜನರ ಅರಿವೆ ತೊಟ್ಟು ಫೋಟೊಕ್ಕೆ ಪೋಜಕೊಟ್ಟೆವು. ನಂತರ ಕುದುರೆಯ ಮೇಲೆ ಪ್ರಯಾಣ ಆರಂಭವಾಯಿತು. ಇಳಿಯುವಾಗ ತುಂಬಾ ಭಯವೆನಿಸುತ್ತಿತ್ತು ತರಬೇತಿ ಹೊಂದಿದ ಕುದುರೆಗಳಿದ್ದ ಕಾರಣ ಏನು ತೊಂದರೆಯಾಗಲಿಲ್ಲ. ಕುದುರೆಯಿಂದ ಕೆಳಗಿಳಿದ ನಂತರ ಎದೆಯ ಬಡಿತ ಯಥಾ ಸ್ಥಿತಿಗೆ ಬಂತು.

ದಿನಾಂಕ ೧೭ರಂದು ಮುಂಜಾನೆ ಸಿಮ್ಲಾದಿಂದ ಕುಲು ನಗರಕ್ಕೆ ಪ್ರಯಾಣ ಬೆಳೆಸಿದೆವು. ಸಿಮ್ಲಾದಿಂದ ಕುಲು ಅಂದಾಜ ೧೫೦ ಕಿಲೊ ಮೀಟರ ದೂರ ಇದ್ದರೂ ಗುಡ್ಡಗಾಡು ಪ್ರದೇಶವಾಗಿದ್ದರಿಂದ ಹೊರವಲಯದಲ್ಲಿ ಸ್ವೆಟರ್, ಶಾಲ, ತರಹ ತರಹದ ಉಣ್ಣಿ ಬಟ್ಟೆಗಳ ಅಂಗಡಿಗೆ ಹೋಗಿ ಸ್ವೆಟರ್, ಶಾಲ, ರಜಾಯಿ ಖರೀದಿಸಿ, ಮನಾಲಿಗೆ ಪ್ರಯಾಣ ಆರಂಭಿಸಿದೆವು. ರಾತ್ರಿ ೮ ಗಂಟೆಯ ಸುಮಾರಿಗೆ ಮನಾಲಿ ತಲುಪಿದೆವು. ಟ್ರಾವೆಲ್ ಕಂಪನಿಯವರು ಮನಾಲಿ ಹೊರವಲಯದಲ್ಲಿಯ ಹೋಟೆಲ ರಾಯಲ್ ಗ್ರ್ಯಾಂಡನಲ್ಲಿ ೯ ಕೋಣೆಗಳ ವ್ಯವಸ್ಥೆ ಮಾಡಿದ್ದರು. ಕೋಣೆಗಳು ಚನ್ನಾಗಿದ್ದವು ತಿಂಡಿ-ಊಟ ತಕ್ಕಮಟ್ಟಿಗೆ ಮನಾಲಿಯಲ್ಲಿಯ ತಾಪಮಾನ ೧೦ಡಿಗ್ರಿ ಸೆಲಿಸಿಯಸ್ ಇತ್ತು.

ದಿನಾಂಕ ೧೮ರಂದು ವಶಿಷ್ಟ ಋಷಿ ಮಂದಿರ, ಬಿಸಿ ನೀರಿನ ಕುಂಡ, ರಾಮಮಂದಿರ, ಪುರಾತನ ವಸ್ತುಸಂಗ್ರಾಲಯ, ಮಹಾಭಾರತಕ್ಕೆ ಸಂಬಂಧಿಸಿದ ಕೆಲವು ಸ್ಥಳಗಳನ್ನು ನೋಡಿದೆವು. ದಿನಾಂಕ ೧೯ರಂದು ಮುಂಜಾನೆ ೯ಗಂಟೆಗೆ ರೊಂತಾಗನತ್ತ ನಮ್ಮ ಪ್ರಯಾಣ ಸಾಗಿತು. ರೊಂತಾಗಕ್ಕೆ ಹೋಗುವ ದಾರಿಯಲ್ಲಿ ಪಲಚಾನ, ಕೋಠಿ, ಗುಲಾಬಾ, ರಾಲಾಫಾಲ್ ಮಡಿ ನಂತರ ರೊಂತಾಗದ ಹಿಮಪರ್ವತ ತಲುಪಿದೆವು. ಮನಾಲಿಯಿಂದ ರೊಂತಾಗಕ್ಕೆ ಹೋಗುವ ವಿಶೇಷ ವಾಹನಗಳಿವೆ. ವಿಶೇಷವೆಂದರೆ ಅನುಭವ ಹೊಂದಿದ, ಪ್ರತಿದಿನ ಅದೇ ದಾರಿಯಲ್ಲಿ ಸುತ್ತಾಡುವ ವಾಹನ ಓಡಿಸುವ ಚಾಲಕರು. ೧೩೫೦೦ ಮೀಟರ ಎತ್ತರದ ಹಿಮಪರ್ವತಕ್ಕೆ ನಮ್ಮ ವಾಹನ ತಲುಪಿತು, ಅಲ್ಲಿಯ ದೃಶ್ಯ ನೋಡಿ ಬಹಳ ಆನಂದವಾಯಿತು.

ಸಮಸ್ತ ಸೃಷ್ಟಿಯೂ ಚೈತನ್ಯಮಯ, ಅದು ಭಗವಂತನ ಚೈತನ್ಯವೇ ಎಂದು ಅನೇಕ ಕವಿಗಳು, ದಾರ್ಶನಿಕರು ಹೇಳಿದ್ದಾರೆ. ನಿಸರ್ಗ ಎಂಬುದು ಸೃಷ್ಟಿಕರ್ತನ ಇರುವಿಗೆ ಚಿರಂತನ ಸಾಕ್ಷಿ. ಭಗವಂತ ನಿಸರ್ಗದ ಮೂಲಕವೇ ತನ್ನ ಅಸ್ಥಿತ್ವವನ್ನು ಸಾಬೀತುಗೊಳಿಸುತ್ತಾನೆ. ಹಿಮಪರ್ವತದ ಮೇಲೆ ನಾವೆಲ್ಲ ಮಂತ್ರಮುಗ್ಧರಾದೆವು. ಹಿಮಪರ್ವತದ ಮೇಲೆ ಶೆಲ್ಫಿ, ಗ್ರುಪ್, ಜೋಡಿ-ಜೋಡಿ ಪೋಟೊಗಳನ್ನು ತೆಗೆದು ಪ್ರಕೃತಿ ಮಾತೆಗೆ ವಂದಿಸಿ ಮರಳಿದೆವು. ದಾರಿ ಉದ್ದಕ್ಕೂ ಅತೀ ಎತ್ತರವಾಗಿ ನಿಂತ ದೇವದಾರು ವೃಕ್ಷಗಳು ನೋಡಲು ಎರಡೂ ಕಣ್ಣುಗಳು ಸಾಲದಾದವು. ಹಿಮಪರ್ವತದಿಂದ ಕೆಳಗೆ ಬರುವಾಗ ಕಿಟಕಿಯ ಆಚೆಗೆ ನೋಡಿದರೆ ತುಂಬಾ ಭಯ. ನಮ್ಮ ವಾಹನ ಚಾಲಕ ಜಯಕೃಷ್ಣ ಶರ್ಮಾ ಅವನೊಂದಿಗೆ ಮಾತನಾಡುತ್ತಾ ಎಷ್ಟು ದಿನಗಳಿಂದ ಇಲ್ಲಿ ವಾಹನ ಚಾಲನೆ ಮಾಡುತ್ತಿರುವಿರಿ ಎಂದು ಪ್ರಶ್ನಿಸಿದಾಗ ಆತ 'ಸುಮಾರು ೩೦ ವರ್ಷಗಳಿಂದ ಇಲ್ಲಿ ವಾಹನ ನಡೆಸುತ್ತಿರುವೆ' ಎಂದು ಉತ್ತರಕೊಟ್ಟನು ಜಯಕೃಷ್ಣ ಶರ್ಮಾ ತನ್ನ ಅನುಭವವನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಾ- ಇಲ್ಲಿ ಚಳಿ ಬಹಳ, ಒಂದೆರಡು ಅಡಿ ಜಾರಿದರೆ, ವಾಹನ ಕನಿಷ್ಠ

೧೦೦೦ ಮೀಟರ ಕೆಳಗೆ ಬೀಳುವದು. ಕೆಲವು ಸಲ ಎರಡು-ಮೂರು ಗಂಟೆಗಳಲ್ಲಿ ಹಿಮ ರಸ್ತೆ ಮೇಲೆ ಬರುತ್ತದೆ. ಆಗ ವಾಹನ ಚಲಿಸುವದು ಅಸಾಧ್ಯ ಅಂತಹ ಸಂದರ್ಭದಲ್ಲಿ ವಾಹನ ಬಿಟ್ಟು ಕಾಲ್ನಡಿಗೆಯಿಂದ ಕೆಳಗೆ ಹೋಗುತ್ತೇವೆ. ೮-೧೦ ದಿನಗಳವರೆಗೆ ರಸ್ತೆಯ ಮೇಲಿನ ಹಿಮ ಕರಗುವುದಿಲ್ಲ, ತಾವು ಬಂದ ಸಮಯ ಸರಿಯಾಗಿದೆ. ಇನ್ನು ೬-೮ ದಿನಗಳ ನಂತರ ಹಿಮಪರ್ವತಕ್ಕೆ ಹೋಗುವದು ನಿಲ್ಲುತ್ತದೆ. ಮೇಲೆ ಹೋಗಲು ಅನುಮತಿ ಪತ್ರ ಸಹ ನೀಡುವುದಿಲ್ಲ ಹೀಗೆ ಎಲ್ಲವು ಹೇಳುತ್ತಾ ತನ್ನ ಪರಿವಾರ ಬಗ್ಗೆ ಹೇಳಿದ ಆತನಿಗೆ ಎರಡು ಗಂಡು ಒಂದು ಹೆಣ್ಣು ಮಗು ಎರಡು ಗಂಡು ಮಕ್ಕಳು ಎಂಬಿಎ ಪದವಿ ಪಡೆದು ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗಳು ಇಂಜನೀಯರಿಂಗ್ ಪದವಿ ಪಡೆದಿದ್ದಾಳೆ, ಅವಳ ಮದುವೆಯೂ ಆಗಿದೆ ಅಳಿಯನು ಇಂಜನೀಯರ ಇದ್ದಾನೆ. ವಾಹನ ಚಾಲಕನ ಯಶೋಗಾಥೆ ಕೇಳಿ ನನಗೆ ಖುಷಿಯಾಯಿತು. ಕಾಯಕದಲ್ಲಿಯೇ ಕೈಲಾಸವನ್ನು ಕಂಡುಕೊಂಡ ಜಯಕೃಷ್ಣ ಶರ್ಮಾಗೆ ಒಂದು ಸಲಾಂ ಹೇಳಿ ಮರಳಿದೆವು. ಮನಾಲಿಯಿಂದ ದೆಹಲಿ, ಅಲ್ಲಿಂದ ಮುಂಬೈಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದೆವು.

ದಿನಾಂಕ ೨೧ರಂದು ಮುಂಬಯಿ ನಗರದಲ್ಲಿ 'ನಮ್ಮ ಸ್ನೇಹಿತ ಪ್ರೊ. ಸದಾಶಿವ ಪವಾರ ಇವರ ಸಹೋದರಿಯ ಮಗನ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು. ಒಳ್ಳೆಯ ಮಂಗಲಭವನದಲ್ಲಿ ಮದುವೆ ಸಮಾರಂಭ ಏರ್ಪಾಟಾಗಿತ್ತು. ಕರ್ನಾಟಕ ಶೈಲಿಯ ಭೋಜನ ತಯಾರಿಸಿದ್ದರು. ಮದುವೆ ಮುಗಿಸಿ, ರಾತ್ರಿ ೧೦ ಗಂಟೆಗೆ ಸಿದ್ಧೇಶ್ವರ ಎಕ್ಸಪ್ರೆಸ್ ರೈಲು ಹತ್ತಿ ಮರುದಿನ ರೈಲು ಅಂದರೆ ದಿನಾಂಕ ೨೨ರ ಮುಂಜಾನೆ ೭.೨೫ಕ್ಕೆ ಸೋಲಾಪುರ ರೈಲುನಿಲ್ದಾಣದ ೨ನೆಯ ಪ್ಲಾಟಫಾರ್ಮಿಗೆ ತಲುಪಿತು. ೪ನೆಯ ಪ್ಲಾಟಫಾರ್ಮನಲ್ಲಿ ಬಸವಾ ಎಕ್ಸಪ್ರೆಸ್ ರೈಲು ವಿಜಯಪುರಕ್ಕೆ ಹೊರಡುವದರಲ್ಲಿ ಇತ್ತು. ಅವರಸರದಲ್ಲಿ ೧೪ ಜನರು ೪೪ ಲಗೇಜಗಳೊಂದಿಗೆ ಓಡೋಡಿ ರೈಲಿನಲ್ಲಿ ಕುಳಿತು ೯.೪೦ಕ್ಕೆ ಗುಮ್ಮಟ ನಗರಿಗೆ ತಲುಪಿದೆವು.

ದೇಶ ಸುತ್ತು ಕೋಶ ಓದು ಎಂಬ ಗಾದೆಯಂತೆ ಪ್ರತಿಯೊಬ್ಬರೂ ದೇಶ ಸುತ್ತಲೇ ಬೇಕು ಪ್ರವಾಸದಲ್ಲಿ ವಿವಿಧ ಜೀವನ ಶೈಲಿ, ಬಡತನ, ಆಚಾರ-ವಿಚಾರ ಭಾಷೆ, ಸಂಸ್ಕೃತಿ, ಧರ್ಮ ಎಲ್ಲವನ್ನು ಕಾಣುತ್ತೇವೆ. ನಾವು ಪ್ರವಾಸಕ್ಕೆ ಹೊರಡುವ ಎರಡು ದಿನ ಮುಂಚೆ ೫೦೦ ಹಾಗೂ ೧೦೦೦ ಮುಖಬೆಲೆಯ ನೋಟು ರದ್ದಾಗಿದ್ದವು. ನೋಟು ರದ್ದಾಗಿದ್ದರಿಂದ ನಮಗೆ ಹಣದ ತೊಂದರೆಯಾಗಲಿಲ್ಲ ಕಾರಣ ಎಲ್ಲವು ಎರಡು ತಿಂಗಳ ಮುಂಚಿತವಾಗಿಯೇ ವ್ಯವಸ್ಥೆ ಮಾಡಿಕೊಂಡಿದ್ದೆವು. ಸಣ್ಣ ಪುಟ್ಟ ಖರ್ಚಿಗಾಗಿ ಅಲ್ಲಲ್ಲಿ ಎಟಿಎಂ ಮುಂದೆ ಇದ್ದ ಸಾಲುಗಳಲ್ಲಿ ನಿಂತು ಹಣ ತಗೆದುಕೊಂಡು ಮುಂದೆ ಸಾಗುತ್ತಿದ್ದೆವು. ನಾನು ಹೋದ ಎಲ್ಲ ಕಡೆಗಳಲ್ಲಿಯೂ ಅಂದರೆ ಹೋಟೆಲ ಮಾಲಕರಿಗೆ, ಮಾಣಿಗಳಿಗೆ, ರೂಮಬಾಯ್‌ಗಳಿಗೆ, ಮ್ಯಾನೇಜರಗಳಿಗೆ, ಟ್ಯಾಕ್ಸಿಯವರಿಗೆ, ವ್ಯಾಪಾರಸ್ಥರಿಗೆ, ಸಾಮಾನ್ಯ ಜನರಿಗೆ ೫೦೦ ಹಾಗೂ ೧೦೦೦ ನೋಟು ರದ್ದತಿಯ ಬಗ್ಗೆ ಕೇಳಿದಾಗ ಎಲ್ಲರೂ 'ಇದೊಂದು ಉಜ್ವಲ ಭವಿಷ್ಯಕ್ಕೆ ನಾಂದಿಯಾಗಲಿದೆ', 'ಅನ್ಯಾಯದ ಹಣ ಹಾಳಾಗಲಿ' 'ಭ್ರಷ್ಟಾಚಾರ ನಿಲ್ಲಲಿ', 'ಇದರಿಂದ ನಮಗೆ ಬಹಳ ಸಂತೋಷವಾಗಿದೆ' ಎಂಬ ಅಭಿಪ್ರಾಯ ಎಲ್ಲ ಕಡೆಗೂ ಬಂದಿತು. ವಿವಿಧ ಕ್ಷೇತ್ರದ ಕನಿಷ್ಠ ೩೦-೩೫ ಜನರ ಅಭಿಪ್ರಾಯ ನಾನು ಕೇಳಿದ್ದೇನೆ, ಯಾರೊಬ್ಬರು ' ಹೀಗೆ ಮಾಡಬಾರದಿತ್ತು' ಅಂತಾ ಹೇಳಲಿಲ್ಲ. ಅವರಂತೆ ನಾವು ಸಹ ಒಳ್ಳೆಯ ದಿನಗಳು ಬರಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.

**"ಭಾರತಾಂಬೆಯ ಜನಸಿ ನಿನ್ನೊಳು ಧನ್ಯನಾದೆನು ದೇವಿಯೆ**
**ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೇ"**

ರಾಷ್ಟ್ರಕವಿ ಕುವೆಂಪು ಅವರು ಹೇಳಿರುವಂತೆ ಭಾರತ ದೇಶದಲ್ಲಿ ಜನಸಿ ಧನ್ಯನಾದೆ ಎಂಬಂತೆ ನಾವು ಈ ಭಾರತ ದೇಶದಲ್ಲಿ ಹುಟ್ಟಿ ಧನ್ಯವಾಗಿದ್ದೇವೆ.

■■

ಹಿಂದಿ ವಿಭಾಗ, ಎಸ್.ಬಿ.ಕಲಾ & ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪುರ
ಮೊ. ೯೪೪೮೧೪೫೭೦೫